# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 138 (11)

**ಸದಸ್ಯರ ಹೆಸರು** : ಶ್ರೀಮತಿ ಹೇಮಲತಾ ನಾಯಕ್
(ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 11.08.2025

**ಉತ್ತರಿಸುವವರು** : ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯು ಮಾಧ್ಯಮ ಪ್ರಚಾರದ ಕೆಲಸವನ್ನು ಟೆಂಡರ್ ಇಲ್ಲದೇ ಖಾಸಗಿ ವ್ಯಕ್ತಿಗೆ ಹೇಗೆ ನೀಡಲಾಗಿದೆ; ನಿಯಮ ಉಲ್ಲಂಘನೆಗೆ ಯಾರು ಹೊಣೆ; | ಪ್ರಚಾರ ಘಟಕದಲ್ಲಿ ಮಾಧ್ಯಮ ಪ್ರಚಾರದ ಚಟುವಟಿಕೆಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರನ್ವಯ ಹಾಗೂ ಕೆಲವು ಪ್ರಕರಣಗಳಲ್ಲಿ 4(ಜಿ) ರಡಿಯಲ್ಲಿ ವಿನಾಯಿತಿ ಮೇರೆಗೆ ನಿರ್ವಹಿಸಲಾಗುತ್ತಿದೆ. |
| ಆ) | ಸರ್ಕಾರದ ನಿಯಮದ ಪ್ರಕಾರ ದೊಡ್ಡ ಮೊತ್ತದ ಕೆಲಸಗಳಿಗೆ ಟೆಂಡರ್ ಕರೆಯಬೇಕಾಗಿದ್ದು, ಇದನ್ನು ಮೀರಿ ಖಾಸಗಿ ಪತ್ರಿಕೆಗೆ ನೀಡಲಾಗಿದ್ದು, ಇದನ್ನು ಸರ್ಕಾರ ಹೇಗೆ ಸಮರ್ಥಿಸಿಕೊಳ್ಳಬಹುದು; (ಮಾಹಿತಿ ನೀಡುವುದು) | ನೇರವಾಗಿ ಖಾಸಗಿ ಪತ್ರಿಕೆಗಳ ಮೂಲಕ ಅರಣ್ಯ ಇಲಾಖೆಯ ಪ್ರಚಾರ ಕಾರ್ಯ ಕೈಗೊಂಡಿರುವುದಿಲ್ಲ. |
| ಇ) | ಪ್ರಚಾರಕ್ಕಾಗಿ ಸರ್ಕಾರ ನಿಗದಿಪಡಿಸಿದ ಅನುದಾನವೆಷ್ಟು; (ಮಾಹಿತಿ ನೀಡುವುದು) | 2025-26ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿ ರೂ.217.50 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದೆ. |
| ಈ) | ಅರಣ್ಯ ರಕ್ಷಣೆಗೆ ಹಣವಿಲ್ಲ ಎಂದು ಹೇಳುವ ಸರ್ಕಾರ ಪ್ರಚಾರಕ್ಕಾಗಿಯೇ ಲಕ್ಷಾಂತರ ರೂಪಾಯಿಗಳು ಖರ್ಚು ಮಾಡುವುದು ಸರಿಯೇ: ಈ ಹಣವನ್ನು ಅರಣ್ಯ ಕಾರ್ಮಿಕರ ವೇತನಕ್ಕೆ ಅಥವ ಮೂಲ ಸೌಲಭ್ಯಗಳಿಗೆ ಬಳಸಬಹುದಲ್ಲವೇ; | ಕರ್ನಾಟಕದ ಅರಣ್ಯ ಸಂಪತ್ತು, ವನ್ಯಜೀವಿ ಸಂಕುಲಗಳ ಮತ್ತು ಪರಿಸರವನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗಾಗಿ ಉಳಿಸಿಕೊಡಬೇಕಿರುವುದರ ಮಹತ್ವವನ್ನು ತಿಳಿಸಿಕೊಡುವುದರ ಅರಿವನ್ನು ಸಾರ್ವಜನಿಕರಲ್ಲಿ ಮುಖ್ಯವಾಗಿ ಶಾಲಾ, ಕಾಲೇಜು ಮಕ್ಕಳಲ್ಲಿ ವ್ಯಾಪಕವಾಗಿ ಜನಜಾಗೃತಿ ಮೂಡಿಸುವ ಕೆಲಸವನ್ನು ಪ್ರಚಾರ ಕಾರ್ಯಗಳ ಮೂಲಕ ಕೈಗೊಳ್ಳುವುದು ಇಲಾಖೆಯ ಮುಖ್ಯ ಚಟುವಟಿಕೆ ಕೈಗೊಳ್ಳುವುದು ಇಲಾಖೆಯ ಜವಾಬ್ದಾರಿಯಾಗಿದೆ. |
| ಉ) | ಈ ವ್ಯವಹಾರದಲ್ಲಿ ಭ್ರಷ್ಟಾಚಾರದ ಶಂಕೆ ಇದ್ದು, ಸರ್ಕಾರ ತನಿಖೆ ನಡೆಸಿದೆಯೇ; ಈ ದುರ್ಬಳಕೆಗೆ ಕಾರಣಕರ್ತರು ಯಾರು? (ಮಾಹಿತಿ ನೀಡುವುದು) | ಯಾವುದೇ ಪ್ರಕರಣವಿರುವುದಿಲ್ಲ. |

**ಸಂಖ್ಯೆ: ಅಪಜೀ 35 ಎಫ್‌ಟಿಎಸ್ 2025**

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು